ಎಂದರು. ಪ್ರಸಾದ ತೆಗೆದುಕೊಳ್ಳುವಾಗ ಶ್ರೀಮಾತೆಯವರು ತಮ್ಮ ಕೈಯಿಂದಲೇ ಬಡಿಸಿ ನಮಗೆ ಊಟ ಮಾಡಿಸಿದರು.

ಆಗ ಶ್ರೀಮಾತೆಯವರ ಮೈಬಣ್ಣ ಅಷ್ಟೇನೂ ಕಾಂತಿಯುಕ್ತವಾಗಿರಲಿಲ್ಲ – ತಾಮ್ರದ ಬಣ್ಣದಂತಿತ್ತು. ವಯಸ್ಸಾದ ಕಾರಣ ಆಗ ಅವರ ಮೈಬಣ್ಣ ಈ ರೀತಿ ಮಾಸಿಹೋಗಿತ್ತೆಂದು ನಾನು ನನ್ನ ತಾಯಿ, ಚಿಕ್ಕತಾಯಿಯವರಿಂದ ಕೇಳಿದ್ದೆ. ಮೊದಲಿಗೆ ಅವರ ದೇಹಕಾಂತಿ ಬಹಳ ಉಜ್ವಲವಾಗಿತ್ತಂತೆ. ಅವರ ತಲೆಗೂದಲು ಬಹಳ ನೀಳವಾಗಿತ್ತು ಹಾಗೂ ಕಪ್ಪು ಬಣ್ಣದಿಂದ ಕೂಡಿ ಸುಂದರವಾಗಿತ್ತು. ಮರಳಿ ಬರುವಾಗ ಶ್ರೀಮಾತೆಯವರು ನಮಗೆ ನಮ್ಮ ಮನೆಯ ಇತರರಿಗಾಗಿ ಸಾಕಷ್ಟು ಪೂರಿ ಹಾಗೂ ಬೂಂದಿ ಪ್ರಸಾದ ಕೊಟ್ಟರು. ನಾನು ಶ್ರೀಮಾತೆಯವರನ್ನು ಭೇಟಿಯಾದುದು ಇದೊಂದೇ ಬಾರಿ. ಆಗ ನನಗೆ ಹದಿಮೂರು ವರ್ಷ ವಯಸ್ಸು. ಆದರೆ ಆ ಒಂದು ಸಲದ ಭೇಟಿಯ ನೆನಪು ನನಗೆ ೯೪ನೇ ವಯಸ್ಸಿನಲ್ಲಿ ಕೂಡ ಸ್ಪಷ್ಟವಾಗಿದೆ. ❖

# ಮಾತೃದರ್ಶನದ ನೆನಪು

ಮೂಲ ಬಂಗಾಳಿ : **ಜಿತೇಂದ್ರಚಂದ್ರ ದತ್ತ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಗವಾನ್ ಶ್ರೀರಾಮಕೃಷ್ಣರ ಸಂದೇಶ ಹಾಗೂ ಆದರ್ಶಗಳನ್ನು ಅನುಸರಿಸಿ ಜೀವನವನ್ನು ನಡೆಸುವ ಉದ್ದೇಶದಿಂದ, ಮತ್ತು ಯುವಜನರಲ್ಲಿ ಶ್ರೀರಾಮಕೃಷ್ಣರ ಜೀವನ- ಉಪದೇಶಗಳ ಬಗ್ಗೆ ಚಿಂತನೆ ನಡೆಸುವಂತೆ ಮಾಡಲು ನಾವು ಕೆಲವು ಮಂದಿ ಸ್ನೇಹಿತರು ಮೈಮನ್‌ಸಿಂಗ್ (ಊರಿನ ಹೆಸರು, ಈಗ ಬಾಂಗ್ಲಾದೇಶದಲ್ಲಿದೆ) ನಲ್ಲಿದ್ದ 'ಮಹಾಕಾಳಿ ಪಾಠಶಾಲೆ'ಯ ಒಂದು ಕೋಣೆಯಲ್ಲಿ ನಿರ್ದಿಷ್ಟ ಸಮಯದಲ್ಲಿ ಒಟ್ಟುಸೇರುತ್ತಿದ್ದೆವು. ಇದು ೧೯೧೧ನೇ ಇಸವಿಯಲ್ಲಿ ನಡೆದ ಘಟನೆ. ೧೯೧೪ರ ಮಾರ್ಚ್ ತಿಂಗಳಲ್ಲಿ ನಾವು ಶಾಲೆಯ ವತಿಯಿಂದ ಶ್ರೀರಾಮಕೃಷ್ಣರ ಇನ್ನೊಬ್ಬರು ಲೀಲಾ ಸಹಾಯಕರೂ ಈಶ್ವರಕೋಟಿಗಳೂ ಆಗಿದ್ದ ಸ್ವಾಮಿ ಪ್ರೇಮಾನಂದರನ್ನು ಮೈಮನ್‌ಸಿಂಗ್‌ಗೆ ಕರೆದುಕೊಂಡು ಬಂದಿದ್ದೆವು. ಈ ಸಂದರ್ಭದಲ್ಲಿ ಅವರು ನಮ್ಮ ಮನೆಯಲ್ಲಿ ಏಳೆಂಟು ದಿನ ತಂಗಿದ್ದರು. ಈ ಕೆಲವು ದಿನಗಳಲ್ಲಿ ಅವರ ಸೇವೆ ಮಾಡುವ ಅವಕಾಶವನ್ನು ಪಡೆದು ನಾನು ಧನ್ಯನಾಗಿದ್ದೆ. ಅದಾದ ಬಳಿಕ ಅವರು ಕೆಲವು ದಿನ ಢಾಕಾ, ನಾರಾಯಣಗಂಜ್ ಇಲ್ಲೆಲ್ಲ ಇದ್ದರು; ಆ ದಿನಗಳಲ್ಲೂ ನಾನು ಅವರ ಜೊತೆಗಿರುವ ಸೌಭಾಗ್ಯವನ್ನು ಪಡೆದಿದ್ದೆ. ಆ ವರ್ಷದಲ್ಲೇ ನಾನು ದುರ್ಗಾಪೂಜೆಯ ನಂತರ ಪರಮ ಆರಾಧ್ಯರಾದ ಶ್ರೀಮಾತೆಯವರಿಂದ ದೀಕ್ಷೆ ಪಡೆದೆ.



ಕಾರ್ಯನಿಮಿತ್ತದಿಂದ ನನಗೆ ಹಲವು ಬಾರಿ ಕಲ್ಕತ್ತೆಗೆ ಬರಬೇಕಾಗುತ್ತಿತ್ತು. ಈ ಸಂದರ್ಭದಲ್ಲೇ ಶ್ರೀಮಾತೆಯವರ ದರ್ಶನ ಹಾಗೂ ಅವರಿಗೆ ಪ್ರಣಾಮ ಸಲ್ಲಿಸುವ ಸುಯೋಗ ದೊರೆತಿತ್ತು. ಹೆಚ್ಚಿನ ದಿನಗಳಲ್ಲಿ ಪ್ರಣಾಮ ಮಾಡಲು ಅನೇಕ ಮಂದಿ ಭಕ್ತರು ನೆರೆದಿರುತ್ತಿದ್ದರು. ಆದ್ದರಿಂದ ಆಗ ಅವರೊಂದಿಗೆ ವಿಶೇಷವಾಗಿ ಮಾತುಕತೆ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಒಂದು ದಿನ ಅವರಿಗೆ ನಾನು ಪ್ರಣಾಮ ಮಾಡಿದಾಗ, ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ಅದರಿಂದ ನನಗೆ ವಿಶೇಷವಾಗಿ ಕೃತಾರ್ಥನಾದೆನೆಂಬ ಭಾವನೆ ಆವರಿಸಿತು. ಇನ್ನೊಂದು ದಿನ ಅವರ ಬಳಿ ಸಾಧನೆಗೆ ಸಂಬಂಧಪಟ್ಟಂತೆ ಏನೋ ಕೇಳಿದೆ. ಆಗ ಅವರು, ''ಸ್ಮರಣೆ ಮಾಡು'' ಎಂದಷ್ಟೇ ಹೇಳಿದರು. ಅವರ ಈ ಎರಡು ಮಾತುಗಳನ್ನು ಕೇಳಿ, ಅವರ ಮಾತುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಹೇಳಿದ್ದಾರೆಂದು ನಾನು ತಿಳಿದುಕೊಂಡೆ. ಸಾಕ್ಷಾತ್ ಜಗನ್ಮಾತೆಯೇ ನನ್ನ ಮೇಲೆ ಕೃಪೆ ತೋರಿ ನನ್ನ ಸ್ವರೂಪವನ್ನು ನನಗೆ ವ್ಯಕ್ತಗೊಳಿಸಿದರೆಂದು ನಾನು ಅರ್ಥಮಾಡಿಕೊಂಡೆ.

ಇನ್ನೊಂದು ದಿನ ನಾನು 'ಉದ್ಬೋಧನ'ಕ್ಕೆ ಹೋಗಿ, ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಅವರ ಪದತಲದಲ್ಲಿ ಕುಳಿತೆ. ಅವರು ಆಗ ಕಾಲನ್ನು ಕೆಳಗೆ ನೀಡಿ, ಮಂಚದ ಮೇಲೆ ಕುಳಿತಿದ್ದರು. ಇದಕ್ಕಿದ್ದಂತೆ ಆ ಕೋಣೆಯಲ್ಲಿ ಅವರು ಪೂಜೆ ಮಾಡುತ್ತಿದ್ದ ಶ್ರೀ

ರಾಮಕೃಷ್ಣರ ಚಿತ್ರದತ್ತ, ಹಾಗೂ ಗೋಡೆಯ ಮೇಲೆ ತೂಗು ಹಾಕಿದ್ದ ಕಾಳೀಮಾತೆಯ ಚಿತ್ರದತ್ತ ನೋಡಿ ಹೇಳಿದರು: ''ಇವರು (ಅಂದರೆ, ಶ್ರೀರಾಮಕೃಷ್ಣರು) ಹಾಗೂ ಅವರು (ಅಂದರೆ ಕಾಳೀ ಮಾತೆ) ಇಬ್ಬರೂ ಒಂದೇ.'' ಅವರು 'ಒಂದೇ' ಎಂಬ ಶಬ್ದವನ್ನು ಉಚ್ಚರಿಸುವಾಗ ಅವರ ಶರೀರ ಒಂದು ಬಾರಿ ಕಂಪಿಸಿತು. ಕೂಡಲೇ ಅವರ ಶರೀರವೆಲ್ಲ ಇದ್ದಕ್ಕಿದ್ದಂತೆ ಮರಗಟ್ಟಿಹೋಯಿತು. ಆಗ ಅವರ ದೇಹ ತುಸು ಬಾಗಿದಂತಿತ್ತು. ಕಣ್ಣು ಮಿಟುಕಿಸದೆ ಒಂದೇ ದೃಷ್ಟಿಯಿಂದ ಅವರು ಕಾಳೀಮಾತೆಯ ಚಿತ್ರಪಟದತ್ತ ನೋಡುತ್ತ ನಿಂತರು. ಇನ್ನು ಸ್ವಲ್ಪ ಹೊತ್ತಿನ ನಂತರ ಅವರ ದೇಹ ಸಡಿಲಗೊಂಡು, ಸಾಮಾನ್ಯ ಅವಸ್ಥೆಗೆ ಅವರು ಮರಳಿದರು. ನಾನು ಸ್ತಂಭೀಭೂತನಾಗಿ ಶ್ರೀಮಾತೆಯವರ ಈ ಸಮಾಧಿ ಮೂರ್ತಿಯನ್ನು ಕಣ್ಣಾರೆ ನೋಡಿದೆ! ಈ ರೀತಿ ಸಮಾಧಿಯ ಸ್ಥಿತಿಗೇರುವುದು ಅವರ ಪಾಲಿಗೆ ಎಷ್ಟೊಂದು ಸಹಜ! – ಎಂದು ನನಗನ್ನಿಸಿತು. ಅವರು ಬಾಯಿಯಿಂದ ಏನನ್ನು ಹೇಳಿದರೋ, ಆ ಸತ್ಯವನ್ನು ತಾವೇ ನೇರ ಅನುಭವಿಸಿದರು – ಎಂದು ನಾನು ಅರ್ಥಮಾಡಿಕೊಂಡೆ.*

ಸ್ವಾಮಿ ಪ್ರೇಮಾನಂದರು ಒಂದು ದಿನ ಹೇಳುತ್ತಿದ್ದುದನ್ನು ಕೇಳಿಸಿಕೊಂಡೆ: ''ಶ್ರೀರಾಮಕೃಷ್ಣರಲ್ಲಿ ಭಾವ ಹಾಗೂ ಮಹಾಭಾವದ ಅದ್ಭುತ ಪ್ರಕಟಣೆಯನ್ನು ಕಂಡು ನಾವು ಧನ್ಯರಾದೆವು. ಶ್ರೀಮಾತೆಯವರಲ್ಲೂ ಅದೇ ರೀತಿ ಭಾವ, ಮಹಾಭಾವಗಳು ಯಾವಾಗಲೂ ರಾರಾಜಿಸುತ್ತಿದ್ದವು. ಆದರೆ ಅದೆಂತಹ ಮಹಾಶಕ್ತಿಯೆಂದರೆ, ಆ ಭಾವ-ಮಹಾಭಾವಗಳನ್ನು ಅವರು ಯಾವಾಗಲೂ ಅಡಗಿಸಿ ಇಟ್ಟುಕೊಳ್ಳುತ್ತಿದ್ದರು. ಹೊರಗಡೆ ವಿಶೇಷವಾಗಿ ಏನೂ ವ್ಯಕ್ತವಾಗಲು ಬಿಡುತ್ತಿರಲಿಲ್ಲ.'' ಪ್ರೇಮಾನಂದಜಿಯವರ ಈ ಮಾತಿನ ಸತ್ಯತೆಯನ್ನು ಆ ದಿನ ನಾನು ಪ್ರತ್ಯಕ್ಷವಾಗಿ ಕಾಣುವಂತಾಯಿತು. ❖

* ಶ್ರೀಮಾತೆಯವರು ಸೋದರಿ ನಿವೇದಿತಾಗೆ ಹೇಳಿದ್ದರು, ''ಶ್ರೀರಾಮಕೃಷ್ಣರು ಕಾಳಿಯ ಅವತಾರ'' ಎಂಬುದಾಗಿ ('ಲೋಕಮಾತಾ ನಿವೇದಿತಾ' ಗ್ರಂಥ, ಶಂಕರೀ ಪ್ರಸಾದ ಬಸು). ಶ್ರೀರಾಮಕೃಷ್ಣರು ದೇಹತ್ಯಾಗ ಮಾಡಿದ ನಂತರ ಶ್ರೀಮಾತೆಯವರು ಅವರನ್ನು ''ಕಾಳೀ ತಾಯೀ'' ಎಂದು ಸಂಬೋಧನೆ ಮಾಡಿ ಅತ್ತಿದ್ದರು. ಶ್ರೀರಾಮಕೃಷ್ಣರಿಗೂ ಕಾಳಿಗೂ ಅವರು ಅಭೇದತ್ವವನ್ನು ಸಾರಿ ಹೇಳಿದ್ದರು; ಅದೇ ರೀತಿ ತಮಗೂ ಕಾಳಿಗೂ ಅಭೇದತ್ವವನ್ನು ಕೂಡ ಸ್ವೀಕರಿಸಿದ್ದರು. ಇದಕ್ಕೆ ದೃಷ್ಟಾಂತವಾಗಿ, ಶ್ರೀರಾಮಕೃಷ್ಣರ ಅಣ್ಣನ ಮಗ ಶಿವರಾಮನಿಗೆ ಶ್ರೀಮಾತೆಯವರು ತಾವು ಕಾಳಿಯೇ ಎಂಬುದಾಗಿ ಒಪ್ಪಿಕೊಂಡ ವಿಚಾರವನ್ನು ಉಲ್ಲೇಖಿಸಬಹುದು. ಬ್ರಹ್ಮಚಾರಿ ಅಕ್ಷಯಚೈತನ್ಯ ಅವರು ಬರೆದ 'ಶ್ರೀ ಶ್ರೀ ಶಾರದಾದೇವಿ' ಗ್ರಂಥದಲ್ಲಿ ನಿಶಿಕಾಂತ ಮಜುಂದಾರ್ ಹಾಗೂ ಸುರೇಂದ್ರ ರಾಯ್ ಇವರಿಬ್ಬರು ಉಲ್ಲೇಖಿಸಿದ ಎರಡು ಘಟನೆಗಳೂ ನೆನಪಿಗೆ ಬರುತ್ತಿವೆ. ತೇಲೋ ಭೇಲೋ ಎಂಬ ಮೈದಾನದಲ್ಲಿ ಶ್ರೀಮಾತೆಯವರಿಗೆ ಎದುರಾದ ಡಕಾಯಿತ ಶ್ರೀಮಾತೆಯವರಲ್ಲಿ ಕಾಳಿಯನ್ನೇ ಕಂಡಿದ್ದ ಎಂದು ಶ್ರೀಮಾತೆಯವರೇ ಹೇಳಿದ್ದಾರೆ. *(–ಸಂಪಾದಕ)*

## ಶ್ರೀಮಾತೆಯವರ ಉಪದೇಶಗಳು



* **ಶಿಷ್ಯ :** ಅಮ್ಮಾ, ಮನುಷ್ಯನ ನಿಜವಾದ ಸ್ವರೂಪಕ್ಕೂ ದೇವತೆಗೂ ಏನು ವ್ಯತ್ಯಾಸ ?

**ಶ್ರೀಮಾತೆ :** ಮನುಷ್ಯನೇ ದೇವತೆಯಾಗುತ್ತಾನೆ. ಸರಿಯಾಗಿ ಕೆಲಸ ಮಾಡಿದರೆ ಎಲ್ಲರಿಗೂ ಅದು ಸಾಧ್ಯವಿದೆ.

**ಶಿಷ್ಯ :** ಯಾವ ರೀತಿ ಕೆಲಸ ?

**ಶ್ರೀಮಾತೆ :** ಶ್ರೀರಾಮಕೃಷ್ಣರು ಹಾಕಿಕೊಟ್ಟ ವಿಧಿ, ನಿಷೇಧಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಇಷ್ಟದೇವತೆಯನ್ನು ನಿಷ್ಠೆಯಿಂದ ಪ್ರಾರ್ಥಿಸಿದರೆ ಎಲ್ಲವನ್ನೂ ಸಾಧಿಸಬಹುದು.

* **ಶಿಷ್ಯ :** ಅಮ್ಮಾ, ಯಾವ ಮಾರ್ಗದಲ್ಲಿ ನಡೆಯಬೇಕು ?

**ಶ್ರೀಮಾತೆ :** ನಿಮಗೇಕೆ ಭಯ? ಯಾರಿಗೆ ಶ್ರೀರಾಮಕೃಷ್ಣರ ಕೃಪೆ ಲಭಿಸಿದೆಯೋ, ಅಥವಾ ಯಾರು ಅವರ ಸಂಪರ್ಕಕ್ಕೆ ಯಾವುದಾದರೂ ರೀತಿಯಲ್ಲಿ ಬಂದಿರುವರೋ ಅವರಿಗಾಗಿ ಶ್ರೀರಾಮಕೃಷ್ಣರು ಎಲ್ಲವನ್ನೂ ಮಾಡುವರು.

* **ಶಿಷ್ಯ :** ಅಮ್ಮಾ, ನಾವು ಜಪ-ಧ್ಯಾನಗಳನ್ನು ಯಾವ ಪದ್ಧತಿ ಪ್ರಕಾರ ಮಾಡಬೇಕು?

**ಶ್ರೀಮಾತೆ :** ಹೇಗೆ ಬೇಕಾದರೂ ಮಾಡಬಹುದು ; ಹೇಗೆ ಬೇಕೋ ಹಾಗೆ — ಆದರೆ ಶ್ರೀರಾಮಕೃಷ್ಣರಲ್ಲಿ ಸ್ವಲ್ಪ ಮನಸ್ಸಿಟ್ಟು ಮಾಡಬೇಕು. ಈ ರೀತಿ ಮಾಡಿದರೆ ಎಲ್ಲವೂ ಲಭಿಸುವುದು. ನಿನಗೇಕೆ ಚಿಂತೆ ?

* **ಶಿಷ್ಯ :** ಅಮ್ಮಾ, ಚಿಂತೆಯೇನಿಲ್ಲ ; ಆದರೂ ನಿಮ್ಮ ಶ್ರೀಮುಖದಿಂದ ಆದೇಶ ಬರಲಿ ಎಂದೇ ನಾನು ಕೇಳಿದೆ.

**ಶ್ರೀಮಾತೆ :** ನಿಮಗೋಸ್ಕರವೇ ಎಲ್ಲರೂ ಇದ್ದಾರೆ. ಶ್ರೀರಾಮಕೃಷ್ಣರಿದ್ದಾರೆ, ನನ್ನನ್ನಂತೂ ನೀನು ನೋಡುತ್ತಲೇ ಇದ್ದೀಯಾ.

* **ಶಿಷ್ಯ :** ಅಮ್ಮಾ, ನನಗೆ ಸ್ವಾಮೀಜಿ ಹಾಗೂ ಶ್ರೀರಾಮಕೃಷ್ಣರನ್ನು ನೋಡುವ ಸೌಭಾಗ್ಯವುಂಟಾಗಲಿಲ್ಲ.

**ಶ್ರೀಮಾತೆ :** ಭಕ್ತಿಯಿಂದ ಪ್ರಾರ್ಥಿಸು ; ಎಲ್ಲವನ್ನೂ ಪಡೆಯುವೆ. ನಾನು ಹೇಳುತ್ತಿದ್ದೇನೆ, ನೀವು ಧನ್ಯರು. ಏಕೆಂದರೆ ಇಂಥ ಸಮಯದಲ್ಲಿ ನೀವು ಹುಟ್ಟಿದ್ದೀರಿ. ಅವರ ಲೀಲೆಯನ್ನು ನೋಡುವ ಸಮಯವಿದು. ಶ್ರದ್ಧೆ, ಭಕ್ತಿಗಳಿಂದ ಕೂಡಿದ ಕಣ್ಣಿನಿಂದ ನೋಡಿದರೆ ಎಲ್ಲವೂ ಸುಲಭವಾಗಿ ಕಾಣಿಸುವುದು.

*('ಶ್ರೀ ಶಾರದಾದೇವಿ ವಚನವೇದ', ಪು.೪೩೪-೪೩೬)*